**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ -೫೮೩ ೨೭೬**
**ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ**

**ಕುಲಸಚಿವರು**

ಸಂಖ್ಯೆ:ಕವಿಹಂ:ಉಕುಸ(ಶೈ):ಬಂ.ಅ.ಕೇಂ:ತಾ.ಹು.ನೇ:೨೦೨೦-೨೧ ನವೆಂಬರ್ ೦೩. ೨೦೨೦

## ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕನ್ನಡ ವಿಶ್ವವಿದ್ಯಾಲಯದ ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರದ ಆಡಳಿತ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುವ ಸಲುವಾಗಿ ತಾತ್ಕಾಲಿಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

೧. **ನಿರ್ದೇಶಕರು** **ಹುದ್ದೆ: ೦೧** **ಗರಿಷ್ಠ ಮಾಸಿಕ ವೇತನ: ರೂ. ೯೫,೦೦೦/-**

**ವಿದ್ಯಾರ್ಹತೆ:** ಎಂ.ಎ.ಪಿಎಚ್.ಡಿ. ಪದವಿ ಪಡೆದಿರಬೇಕು. ಬಂಜಾರ ಸಮುದಾಯದ ಮತ್ತು ಬಂಜಾರ ಭಾಷಾ ಜ್ಞಾನ ಹೊಂದಿದ ನಿವೃತ್ತ ಪ್ರಾಧ್ಯಾಪಕರು ಅಥವಾ ಕನಿಷ್ಟ ಐದು ವರ್ಷಗಳ ಸಂಶೋಧನೆ/ಬೋಧನಾ ಅನುಭವ ಹೊಂದಿದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಸದರಿ ಹುದ್ದೆಗೆ ನೇಮಕಗೊಳ್ಳುವವರು ಪೂರ್ಣ ಪ್ರಮಾಣದಲ್ಲಿ ಕೇಂದ್ರ ಸ್ಥಾನದಲ್ಲಿದ್ದು ಸೇವೆ ಸಲ್ಲಿಸುವ ಬಗ್ಗೆ ಮುಚ್ಚಳಿಕೆ ಬರೆದುಕೊಡತಕ್ಕದ್ದು.

೨. **ಸಂಶೋಧನಾ ಅಧಿಕಾರಿ** **ಹುದ್ದೆ: ೦೨** **ಗರಿಷ್ಠ ಮಾಸಿಕ ವೇತನ: ರೂ.೬೦,೦೦೦/-**

**ವಿದ್ಯಾರ್ಹತೆ:** ಎಂ.ಎ.ಪಿಎಚ್.ಡಿ. ಪದವಿ ಪಡೆದಿದ್ದು, ಸಂಶೋಧನೆ/ಬೋಧನಾ ಅನುಭವವಿರಬೇಕು, ಕಂಪ್ಯೂಟರ್ ಜ್ಞಾನ ಅವಶ್ಯ. ಬಂಜಾರ ಭಾಷಾ ಜ್ಞಾನ ಹೊಂದಿದವರಿಗೆ ಹುದ್ದೆ-೦೧, ಇತರೆ ಹುದ್ದೆ-೦೧

೩. **ಕಂಪ್ಯೂಟರ್ ಆಪರೇಟರ್** **ಹುದ್ದೆ: ೦೧** **ಗರಿಷ್ಠ ಮಾಸಿಕ ವೇತನ: ರೂ.೨೦,೦೦೦/-**

**ವಿದ್ಯಾರ್ಹತೆ:** ಯಾವುದೇ ಪದವಿ ಪಡೆದಿರಬೇಕು, ಕಂಪ್ಯೂಟರ್ ಕೋರ್ಸ್, ಯೋಜನೆ/ಪುಸ್ತಕಗಳ ವಿನ್ಯಾಸ, ಪೇಜ್‌ಮೇಕರ್ ಮತ್ತು ಎಂ.ಎಸ್. ವರ್ಡ್‌ಗಳಲ್ಲಿ ಪರಿಣತಿ/ ಡಿಟಿಪಿ ಅನುಭವ ಹೊಂದಿರಬೇಕು. ಬಂಜಾರ ಭಾಷಾ ಜ್ಞಾನ ಹೊಂದಿದವರಿಗೆ ಆದ್ಯತೆ.

೪. **ಪ್ರಥಮದರ್ಜೆ ಸಹಾಯಕ** **ಹುದ್ದೆ: ೦೧** **ಗರಿಷ್ಠ ಮಾಸಿಕ ವೇತನ: ರೂ.೧೮,೦೦೦/-**

**ವಿದ್ಯಾರ್ಹತೆ:** ಯಾವುದೇ ವಿಶ್ವವಿದ್ಯಾಲಯದ ಪದವಿಯ ಜೊತೆಗೆ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಕರ್ನಾಟಕ ತಾಂಡಾ ನಿಗಮದಿಂದ ಕಂಪ್ಯೂಟರ್ ತರಬೇತಿ ಪಡೆದವರಿಗೆ ಆದ್ಯತೆ.

೫. **ಕಿರಿಯ ಸಹಾಯಕ** **ಹುದ್ದೆ: ೦೧** **ಗರಿಷ್ಠ ಮಾಸಿಕ ವೇತನ: ರೂ.೧೬,೦೦೦/-**

**ವಿದ್ಯಾರ್ಹತೆ:** ಪಿಯುಸಿ ಪಾಸಾಗಿದ್ದು, ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

೬. **'ಡಿ' ದರ್ಜೆ ನೌಕರ/ವಾಹನ ಚಾಲಕ** **ಹುದ್ದೆ: ೦೧** **ಗರಿಷ್ಠ ಮಾಸಿಕ ವೇತನ: ರೂ.೧೩,೦೦೦/-**

**ವಿದ್ಯಾರ್ಹತೆ:** ಅಂಗೀಕೃತ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ ಹೊಂದಿರಬೇಕು. ಲಘು/ಭಾರಿ ವಾಹನ ಚಾಲನಾ ಪರವಾನಗಿ ಹೊಂದಿದವರಿಗೆ ಆದ್ಯತೆ.

ಈ ಮೇಲ್ಕಂಡ ಹುದ್ದೆಗಳಿಗೆ ಸ್ವ-ವಿವರಗಳುಳ್ಳ ದಾಖಲೆಗಳೊಂದಿಗೆ ಅರ್ಜಿಯು ದಿನಾಂಕ:೧೬.೧೧.೨೦೨೦ರ ಒಳಗೆ ತಲುಪಿರತಕ್ಕದ್ದು, ಆಯ್ಕೆ ಸಮಿತಿ ತೀರ್ಮಾನವೇ ಅಂತಿಮವಾಗಿರುತ್ತದೆ. ಈ ಹುದ್ದೆಗಳು ಸಂಪೂರ್ಣ ತಾತ್ಕಾಲಿಕವಾಗಿದ್ದು, ವಿಶ್ವವಿದ್ಯಾಲಯ ತೀರ್ಮಾನಿಸುವವರೆಗೆ ಅಥವಾ ಯೋಜನೆ ಮುಕ್ತಾಯಗೊಳ್ಳುವವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಜಾರಿಯಲ್ಲಿರುತ್ತವೆ.

ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೂರವಾಣಿ ಮತ್ತು ಫ್ಯಾಕ್ಸ್ : 08394-241335
ಇ.ಮೇಲ್: kannadauniversity@gmail.com